**Samyuktha Karnataka, Bangalore, Aug 14 2012**

# ಟಿಸಿಎಸ್ ಪ್ರಶಸ್ತಿ ಸೈಂಟ್ ಪೌಲ್ಸ್ ಶಾಲೆ ಮಡಿಲಿಗೆ



ಬೆಂಗಳೂರಿನಲ್ಲಿ ನಡೆದ ಟಿಸಿಎಸ್ ಐಟಿ ವಿಜ್ 2012ರ ರಸ ಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ಬಾಲಕರಿಗೆ ಪೊಲೀಸ್ ಆಯುಕ್ತ ಜ್ಯೋತಿ ಪ್ರಕಾಶ್ ಮಿರ್ಜಿ ಪ್ರಶಸ್ತಿಯನ್ನು ವಿತರಿಸಿದರು.

ಬೆಂಗಳೂರು, ಆ. 13: ಟಿಸಿಎಸ್ ಐಟಿ ವಿಜ್ 2012ರ ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಸೈಂಟ್ ಪೌಲ್ಸ್ ಆಂಗ್ಲಶಾಲೆ ವಿಜೇತವಾಗಿದೆ.

ಶಾಲೆಯ ಶಿಶಿರ್ ಉಮೇಶ್ ಮತ್ತು ಆಶ್ರಿತ್ ಎಸ್.ಭಾರದ್ವಾಜ್ ಟ್ರೋಫಿಯೊಂದಿಗೆ ಗ್ಯಾಲಕ್ಸಿ ನೋಟ್ ಮತ್ತು ಟ್ರೋಫಿ ಗೆದ್ದುಕೊಂಡರು.

ಇವರಿಗೆ ತೀವ್ರ ಪೈಪೋಟಿ ನೀಡಿದ ಕುಮಾರನ್ ಚಿಲ್ಡ್ರನ್ಸ್ ಶಾಲೆ ಅತೀತ್.ಕೆ ಮತ್ತು ಶುಭಂ ನಂದಿ ದ್ವಿತೀಯ ಸ್ಥಾನ ಪಡೆದುಕೊಂಡರು.

ಇವರಿಗೆ ರನ್ನರ್ ಅಪ್ ಟ್ರೋಫಿ ಮತ್ತು ಗ್ಯಾಲಕ್ಸಿ ಟ್ಯಾಬ್ ನೀಡಲಾಯಿತು.ಟಿಸಿಎಸ್ ಬೆಂಗಳೂರು ಮುಖ್ಯಸ್ಥ ನಾಗರಾಜ್ ಐಜರಿ ಮಾತನಾಡಿ, ಯುವಕರಲ್ಲಿ ತಂತ್ರಜ್ಞಾನ ಪರಿಚಯಿಸಲು ಉತ್ತಮ ವೇದಿಕೆ ಇದಾಗಿದ್ದು, ರಸಪ್ರಶ್ನೆ, ತರಗತಿಯಿಂದ ಹೊರಗಿನ ಅತ್ಯುತ್ತಮ ಬೋಧನಾ ವಿಧಾನ ಎಂದು ಅಭಿಪ್ರಾಯಪಟ್ಟರು.

ಪೊಲೀಸ್ ಆಯುಕ್ತ ಜ್ಯೋತಿಪ್ರಕಾಶ್ ಮಿರ್ಜಿ ಮತ್ತು ಟಿಸಿಎಸ್ ಬೆಂಗಳೂರು ಮುಖ್ಯಸ್ಥ ಹಾಗೂ ಉಪಾಧ್ಯಕ್ಷ ನಾಗರಾಜ್ ಐಜರಿ, ಟಿಸಿಎಸ್ ಫೈನಾನ್ಷಿಯಲ್ ಸಲ್ಯೂಷನ್ ಅಧ್ಯಕ್ಷ ಎನ್.ಗಣಪತಿ ಸುಬ್ರಮಣ್ಯಂ, ಕೇಂದ್ರ ಮುಖ್ಯಸ್ಥ ಇ.ಎಸ್.ಚಕ್ರವರ್ತಿ ಬಹುಮಾನ ವಿತರಿಸಿದರು.